ಸಾಕ್ಷಿಯನ್ನು ದಿಃ **26.06.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ **4** ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಜಿ. ವಕೀಲರಿಂದಃ-</u>

4 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಯಾವ ಕಾರಣಕ್ಕಾಗಿ ಪಕ್ಷಗಾರನ್ನಾಗಿ ಮಾಡಿದ್ದೀರಿ ಎಂದರೆ ಮಾರಾಟ ಮಾಡುವಾಗ ನನಗೆ ಗೊತ್ತಿಲ್ಲದೇ ಅವರು ಖರೀದಿಸಿದ್ದಾರೆ. ನನಗೆ ಮದುವೆಯಾಗಿ ಸುಮಾರು 30 ವರ್ಷ ಆಗಿದೆ. ಮರಿಕಾಳೇಗೌಡ ಉಃ ಚಿಕ್ಕಣ್ಣೇಗೌಡ ಎಂದರೆ ನನ್ನ ತಂದೆ. 1 ಮತ್ತು 2 ನೇ ಪ್ರತಿವಾದಿಯರು ನನ್ನ ಅಣ್ಣಂದಿರು. ನಾನು ನನ್ನ ತಂದೆಗೆ ಒಬ್ಬಳೇ ಮಗಳು. ನನ್ನನ್ನು ಸಣ್ಣತಾಯಮ್ಮ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿಗೆ ಯಾವಾಗ ಮಾರಾಟವಾಗಿದೆ ಎಂದು ನನಗೆ ನೆನಪಿಲ್ಲ. ಕ್ರಯಪತ್ರ ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ. ನಿಪಿ-14 ರ ದಾಖಲೆಯನ್ನು ನೀವು ಹಾಜರುಪಡಿಸಿ ದ್ದೀರಾ ಎಂದರೆ ಅದನ್ನು ನಾನು ಓದಿಲ್ಲ ಹಾಗೂ ನನಗೆ ಓದಲು ಬರುವುದಿಲ್ಲ. ನಿಪಿ-14 ರ ದಾಖಲೆಯಲ್ಲಿ ನನ್ನ ತಂದೆ ಮರಿಕಾಳೇಗೌಡ ಸಹೋದರರಾದ ಕೆಂಡಗಣ್ಣೇಗೌಡ, ಶಿವಣ್ಣೇಗೌಡ ಮತ್ತು ತಾಯಿಯಾದ ತಿಮ್ಮಮ್ಮ ಮಾರಾಟ ಮಾಡಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಆಸ್ತಿಯನ್ನು ಮರೀಕಾಳೇಗೌಡರ ಮಗಳಾದ ಸಣ್ಣತಾಯಮ್ಮ ಅಂದರೆ ನನ್ನ ಮದುವೆಯ ದರದಿಗಾಗಿ ಮಾರಾಟ ಮಾಡಲಾಗಿದೆ ಎಂದು ಬರೆದಿದೆ ಎಂದರೆ ನನ್ನ ಹೆಸರು ಸಣ್ಣತಾಯಮ್ಮ ಅಲ್ಲ. ನಿಪಿ-14 ರ ಪ್ರಕಾರ ಮುದ್ದಲಾಪುರ ಗ್ರಾಮದ ಸರ್ವೇ ನಂ. 5/2 ರಲ್ಲಿ ಒಂದು ಎಕರೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

ದಾವೆ ಹಾಕುವ ಕಾಲಕ್ಕೆ ದಾಖಲೆಗಳನ್ನು ನಾನೇ ಪಡೆದಿದ್ದೇನೆ. ಸದರಿ ದಾಖಲೆಗಳನ್ನು ನಾನು ಓದಿಲ್ಲ ಆದರೆ ಓದಿಸಿ ತಿಳಿದುಕೊಂಡಿದ್ದೇನೆ. ನಿಪಿ-14 ರ ಪ್ರಕಾರ ಪಮೂರ್ವಕ್ಕೆ ಕೆ.ಎನ್. ಸೋಮೇಶ್ವರರವರ ಜಮೀನು, ಪಶ್ಚಿಮಕ್ಕೆ ಸಣ್ಣತಾಯಮ್ಮರವರ ಜಮೀನು, ಉತ್ತರಕ್ಕೆ ಸರ್ಕಾರಿ ರಸ್ತೆ ಮತ್ತು ನಿಮ್ಮ ಬಾಬ್ತು ತೆಂಗಿನ ತೋಟ ಹಾಗೂ ದಕ್ಷಿಣಕ್ಕೆ ಚಿಕ್ಕಣ್ಣೇಗೌಡರ ಜಮೀನು ಇದರಲ್ಲಿರುವ ಒಂದು ಎಕರೆಯನ್ನು ಮಾರಾಟ ಮಾಡಿಲಾಗಿದೆ ಎಂದರೆ ಚಕ್ಕುಬಂದಿ ಬರೆದಿರ ಬಹುದು, ನನಗೆ ಗೊತ್ತಿಲ್ಲ. ಯಾವ ಸರ್ವೇ ನಂ.ಗಳ ಬಗ್ಗೆ ದಾವೆ ಹಾಕಲು ವಕೀಲರಿಗೆ

ಮಾಹಿತಿ ನೀಡಿದ್ದೀರಿ ಎಂದರೆ ಈಗ ಸರ್ವೇ ನಂ. ಗೊತ್ತಿಲ್ಲ. ಯಾವ ಆಧಾರದ ಮೇಲೆ ದಾವಾ ಸ್ವತ್ತುಗಳ ಚಕ್ಕುಬಂದಿಗಳನ್ನು ಬರೆದಿದ್ದೀರಿ ಎಂದರೆ ಈಗ ನೆನಪಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಎಷ್ಟನೇ ಐಟಂ 4ನೇ ಪ್ರತಿವಾದಿಗೆ ಮಾರಾಟವಾಗಿದೆ ಎಂದು ನೀವು ಹೇಳುತ್ತಿದ್ದೀರಿ ಎಂದರೆ ಗೊತ್ತಿಲ್ಲ. ನಾನು ದುರುದ್ದೇಶದಿಂದ ಅಕ್ರಮ ಆಸ್ತಿ ಗಳಿಸುವ ಸಲುವಾಗಿ ಸುಳ್ಳು ಸರ್ವೇ ನಂ. ಮತ್ತು ಸುಳ್ಳು ಚಕ್ಕುಬಂದಿಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ-8ರ ಚಕ್ಕುಬಂದಿಯಲ್ಲಿರುವ ಒಂದು ಎಕರೆ ಜಮೀನನ್ನು 4ನೇ ಪ್ರತಿವಾದಿ ಖರೀದಿಸಿಲ್ಲ, ಅವರು ಖರೀದಿಸಿರುವ ಜಮೀನಿನ ಚಕ್ಕುಬಂದಿ ನಿಪಿ-14ರಲ್ಲಿ ನಮೂದಿಸಿದೆ ಎಂದರೆ ಸರಿಯಲ್ಲ

ನಿಪಿ-17ರ ದಾನಪತ್ರವನ್ನು ಯಾರು ಯಾರಿಗೆ ಮಾಡಿಕೊಟ್ಟಿದ್ದಾರೆ ಮತ್ತು ಯಾವ ಆಸ್ತಿಯ ಬಗ್ಗೆ ಮಾಡಿಕೊಟ್ಟಿದ್ದಾರೆ ಎಂದರೆ ಯಾರೂ ಕೂಡ ದಾನಪತ್ರ ಮಾಡಿಲ್ಲ. ಸಾಕ್ಷಿಯು ಮುಂದುವರೆದು ದಾನಪತ್ರವನ್ನು ನಾನು ಹಾಜರುಪಡಿಸಿಲ್ಲ ಎನ್ನುತ್ತಾರೆ. ನಿಪಿ-17ರ ದಾಖಲೆಯ ಪ್ರಕಾರ 1ನೇ ಪ್ರತಿವಾದಿಯು ಶ್ರವಣ್ ಎನ್ನುವವರಿಗೆ ದಾವಾ ಷೆಡ್ಯೂಲ್ ಐಟಂ ನಂ.1ನ್ನು ದಾನ ಮಾಡಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ನಿಪಿ-17ರಲ್ಲಿ ಕಾಣಿಸಿರುವ ಶ್ರವಣ್ ಎಂಬ ವ್ಯಕ್ತಿಯನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇತ್ತೆ ಎಂದರೆ ಇಲ್ಲ. ಸದರಿ ಶ್ರವಣ್ 1ನೇ ಪ್ರತಿವಾದಿಯ ಮಗ. 4ನೇ ಪ್ರತಿವಾದಿಗೆ ಮಾರಾಟ ಮಾಡಿ ಎಷ್ಟು ವರ್ಷವಾಯಿತು ಎಂದರೆ ಗೊತ್ತಿಲ್ಲ. ನಿಪಿ-14ರ ಪ್ರಕಾರ ದಿನಾಂಕ 24.04.1995 ರಂದು 4ನೇ ಪ್ರತಿವಾದಿಗೆ ಮಾರಾಟ ಮಾಡಿಲಾಗಿದೆ ಎಂದರೆ ಗೊತ್ತಿಲ್ಲ. ಎಷ್ಟು ಸಮಯದ ಹಿಂದೆ ಸದರಿ ಮಾರಾಟದ ಬಗ್ಗೆ ನಿಮಗೆ ಗೊತ್ತಾಯಿತು ಎಂದರೆ ಸುಮಾರು ಎರಡು ವರ್ಷಗಳ ಹಿಂದೆ ಗೊತ್ತಾಯಿತು, ದಿನಾಂಕ ನೆನಪಿಲ್ಲ. 4ನೇ ಪ್ರತಿವಾದಿಯ ವಿರುದ್ಧ ಈ ದಾವೆಯನ್ನು ಸಲ್ಲಿಸಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅವರಿಗೆ ಕ್ರಯಪತ್ರವಾಗಿ 29 ವರ್ಷ ಕಳೆದಿರುವ ಕಾರಣ ನನಗೆ 4ನೇ ಪ್ರತಿವಾದಿಯ ವಿರುದ್ಧ ದಾವೆ ಸಲ್ಲಿಸಲು ಹಕ್ಕಿಲ್ಲ ಎಂದರೆ ಸರಿಯಲ್ಲ.

ವಾದಪತ್ರದಲ್ಲಿ ನನ್ನ ವಯಸ್ಸನ್ನು 44 ವರ್ಷ ಎಂದು ಕಾಣಿಸಿದ್ದೇನೆ ಎಂದರೆ ಇರಬಹುದು. 4ನೇ ಪ್ರತಿವಾದಿಗೆ ಮಾರಾಟ ಮಾಡುವಾಗ ನನಗೆ 18 ವರ್ಷ ತುಂಬಿತ್ತು.

1995ರಲ್ಲಿ ನನ್ನ ವಯಸ್ಸು ಸುಮಾರು 15 ವರ್ಷ ಎಂದರೆ ಸರಿಯಲ್ಲ. 18 ವರ್ಷ ಆಗಿತ್ತು. ನಾನು ವಯಸ್ಸಿನ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಶಾಲೆಗೆ ಹೋಗಿಲ್ಲ. ನನ್ನ ಹೆಸರಿನಲ್ಲಿ ಸರ್ವೇ ನಂ. 5/2ರಲ್ಲಿ 20 ಗುಂಟೆ ಜಮೀನು ಇತ್ತು. ಹರಿಷಿಣ ಕುಂಕುಮಕ್ಕೆಂದು ತಾಯಿ ಕೊಟ್ಟಿದ್ದರು. ಅದರ ಚಕ್ಕುಬಂದಿ ಹೇಳಲಾಗುತ್ತದೆಯೇ ಎಂದರೆ ನೆನಪಿಲ್ಲ. ಸದರಿ ಜಮೀನಿನ ಖಾತೆ ಈಗ 3ನೇ ಪ್ರತಿವಾದಿಯ ಹೆಸರಿನಲ್ಲಿದೆ. 3ನೇ ಪ್ರತಿವಾದಿಯ ಹೆಸರಿಗೆ ಖಾತೆ ಹೇಗೆ ಹೋಯಿತು ಎಂದರೆ ಸಾಲಕ್ಕೆ ಸಹಿ ಬೇಕು ಎಂದು ನನ್ನನ್ನು ಕರೆದುಕೊಂಡು ಹೋಗಿ ಮೋಸ ಮಾಡಿ ನನ್ನಿಂದ ಬರೆಸಿಕೊಂಡರು. ನನ್ನ ಹೆಸರಿನಲ್ಲಿ ಎಷ್ಟನೇ ಇತವಿವರೆಗೆ ಖಾತೆ ಬರುತ್ತಿತ್ತು ಎಂದು ನೆನಪಿಲ್ಲ. ಸದರಿ 20 ಗುಂಟೆಯ ಖಾತೆ 3ನೇ ಪ್ರತಿವಾದಿಯ ಹೆಸರಿಗೆ ಬದಲಾಗಿರುವುದು ದಾವೆ ಹಾಕುವ ಕಾಲಕ್ಕೆ ನಾನು ನೋಡಿದೆ. 3ನೇ ಪ್ರತಿವಾದಿ ಮೋಸ ಮಾಡಿ ನನ್ನಿಂದ ಪತ್ರ ಬರೆಸಿಕೊಂಡಿದ್ದಾರೆ ಎಂದು ನಾನು ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ. ಈಗ ದಾವಾ ಆಸ್ತಿಗಳು ಯಾವ ಸರ್ವೇ ನಂ.ಗಳಿಗೆ ಬದಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸರ್ವೇ ನಂ. ಚಕ್ಕುಬಂದಿ ಮತ್ತು ಹಿಸ್ಸೆ ತಪ್ಪು ಎಂದರೆ ಸರಿಯಲ್ಲ. ನನ್ನ ಮದುವೆ ಸಮಯದಲ್ಲಿ 20 ಗುಂಟೆ ಜಮೀನನ್ನು ನಾನು ಭಾಗದ ರೂಪದಲ್ಲಿ ತೆಗೆದುಕೊಂಡಿರುವ ಕಾರಣ ಈಗ ಹಿಸ್ಸೆ ಕೇಳಲು ಹಕ್ಕಿಲ್ಲ ಎಂದರೆ ಸರಿಯಲ್ಲ. ನಾನು ಭಾಗ ತೆಗೆದುಕೊಂಡು 29 ವರ್ಷಗಳಾದ ಕಾರಣ ಈಗ ಭಾಗ ಕೇಳಲು ಕಾನೂನಿನ ಅಡಿಯಲ್ಲಿ ಅವಕಾಶ ಇಲ್ಲ ಎಂದರೆ ಸರಿಯಲ್ಲ.

ನಾನು ಕಳೆದ 30 ವರ್ಷಗಳಿಂದ ಗೆರಸನಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ. 1 ಮತ್ತು 2ನೇ ಪ್ರತಿವಾದಿಯರು ಭಾಗವಾಗಿ ಪ್ರತ್ಯೇಕ ವಾಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಕಳೆದ 29 ವರ್ಷಗಳಿಂದ ನನ್ನ ತವರು ಮನೆ ಮತ್ತು ಸಹೋದರರ ಮನೆಗೆ ಹೋಗಿಲ್ಲ. 29 ವರ್ಷಗಳ ಹಿಂದೆ ಭಾಗ ಕೇಳಿ ದಾವೆ ಹಾಕಲು ತೊಂದರೆ ಇತ್ತೆ ಎಂದರೆ ಮೋಸದಿಂದ ದಾಖಲೆ ಬರೆಸಿಕೊಂಡ ಬಗ್ಗೆ ಇತ್ತೀಚೆಗೆ ನನಗೆ ಗೊತ್ತಾದ ಕಾರಣ ಹಿಂದೆ ದಾವೆ ಹಾಕಿಲ್ಲ. ನಾನು, 1 ರಿಂದ 3ನೇ ಪ್ರತಿವಾದಿಯರು ಒಂದಾಗಿ ಕ್ರಯದಾರರಿಂದ ಅಕ್ರಮ ಲಾಭ ಪಡೆಯಲು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.